# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 252 |
| ಉತ್ತರಿಸಬೇಕಾದ ದಿನಾಂಕ | : | 14.12.2021 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಸೊಸೈಟಿ) ದ ಹಾಲಿ ಪದಾಧಿಕಾರಿಗಳ ಅಧಿಕಾರಾವಧಿ ಮುಗಿಯುವುದು ಯಾವಾಗ: | ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕರಜಗಿ ಸಂಘದ ಹಾಲಿ ಪದಾಧಿಕಾರಿಗಳ ಅವಧಿಯು ದಿನಾಂಕ:11.02.2023ಕ್ಕೆ ಮುಗಿಯುತ್ತದೆ. |
| ಆ) | ಕರಜಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣೆಯನ್ನು ನಡೆಸುವುದು ಯಾವಾಗ:(ಚುನಾವಣೆ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡುವುದು) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕರಜಗಿ, ಅಫಜಲಪೂರ ತಾಲ್ಲೂಕು ಸಂಘದ ಈಗಿನ ಆಡಳಿತ ಮಂಡಳಿ ಚುನಾವಣೆಯು ದಿನಾಂಕ: 12.02.2018 ರಂದು ಜರುಗಿದ್ದು, ಮುಂದಿನ ಆಡಳಿತ ಮಂಡಳಿ ಚುನಾವಣೆಯನ್ನು 2023ರಲ್ಲಿ ಜರುಗಿಸಲಾಗುವುದು. ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960 ರ ನಿಯಮ 13(ಡಿ)(1) ರನ್ವಯ ಸಂಘದ ಆಡಳಿತ ಮಂಡಳಿ ಅವಧಿಯು ಮುಗಿಯುವ 06 ತಿಂಗಳ ಮುಂಚೆ ಇಲಾಖೆಗೆ ವರದಿ ಸಲ್ಲಿಸತಕ್ಕದ್ದು ಎಂದು ಇರುತ್ತದೆ. |
| ಇ) | ಚುನಾವಣೆಯಲ್ಲಿ ಭಾಗವಹಿಸುವ ಮತದಾರರ ಸೇರ್ಪಡೆಯ ಪ್ರಕ್ರಿಯೆಯ ಬಗ್ಗೆ ಮಾಹಿತಿ ನೀಡುವುದು. | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 19, 20(2)(ಎ), (ಎi), (ಎii), (ಎiii), (ಎiv), (ಎv) ಮತ್ತು 29(ಸಿ) ರನ್ವಯ ಪರಿಶೀಲಿಸಿ ಚುನಾವಣೆಯಲ್ಲಿ ಮತದಾರರಿಗೆ ಭಾಗವಹಿಸಲು ಅವಕಾಶ ನೀಡಲಾಗಿದೆ. |
| ಈ) | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರು, ಕಾರ್ಯದರ್ಶಿ ಸೇರಿದಂತೆ ವಿವಿಧ ಪದಾಧಿಕಾರಿಗಳು ಎಷ್ಟು ಬಾರಿ ಸಂಘಕ್ಕೆ ನೇಮಕ / ಆಯ್ಕೆಗೊಂಡಿದ್ದಾರೆ. | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕರಜಗಿ, ಅಫಜಲಪೂರ ತಾ: ಸಂಘದಲ್ಲಿ ಶ್ರೀ ಲೋಕಣ್ಣಾ ಜಿಡಗಿ ಇವರು ಸಂಘವು ನೋಂದಣಿ ನಂತರ ತಹಲ್‌ವರೆಗೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಸಿದ್ದಣ್ಣಾ ಎಸ್. ಹಾಲಹಳ್ಳಿ ಇವರು ಪ್ರಸ್ತುತ ಹಾಗೂ ಸಂಘ ನೋಂದಣಿ ನಂತರ 03 ಬಾರಿ ಸಂಘದ ಅಧ್ಯಕ್ಷರಾಗಿ ಚುನಾವಣೆ ಮೂಲಕ ಆಯ್ಕೆಯಾಗಿರುತ್ತಾರೆ. ವಿವರ ಈ ಕೆಳಗಿನಂತಿದೆ.<br><br>1) ಸನ್ 2007-08 ರಿಂದ 2011-12 ರವೆಗೆ ಶ್ರೀ ಸಿದ್ದಣ್ಣಾ ಎಸ್ ಜಾಲಹಳ್ಳಿ ಇವರು ಅಧ್ಯಕ್ಷರಾಗಿ ಹಾಗೂ ಶ್ರೀ ಭೀಮಾಶಂಕರ ಹೂವಣ್ಣಾ ಭುಂಯಾರ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. |

| | | |
|---|---|---|
| | | 2) ಸನ್ 2012-13 ರಿಂದ 2017-18 ರವೆಗೆ ಶ್ರೀ ಸಿದ್ದಣ್ಣ ಎಸ್ ಜಾಲಹಳ್ಳಿ ಇವರು ಅಧ್ಯಕ್ಷರಾಗಿ ಹಾಗೂ ಶ್ರೀ ಭೀಮಾಶಂಕರ ಹೂವಣ್ಣ ಭುಂಯಾರ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.<br>3) ಸನ್ 2018-19 ರಿಂದ ತಹಲವರೆಗೂ ಶ್ರೀ ಸಿದ್ದಣ್ಣ ಎಸ್ ಜಾಲಹಳ್ಳಿ ಇವರು ಅಧ್ಯಕ್ಷರಾಗಿ ಹಾಗೂ ಶ್ರೀ ರಾಜಕುಮಾರ ಅಪ್ಪಾರಾವ ಜಿಡೆ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. |
| ಉ) | ಪ್ರಸ್ತುತ ಕರಜಗಿ ಪ್ರಾಥಮಿಕ ಪತ್ತಿನ ಸಂಘದಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು: (ಸದಸ್ಯರ ಸಂಪೂರ್ಣ ಪಟ್ಟಿಯನ್ನು ನೀಡುವುದು) | ಪ್ರಾಥಮಿಕ ಕೃಷಿ ಪತ್ತಿನ ಕಜಿವಗಸಹಕಾರ ಸಂಘ ನಿ.,ಕರಜಗಿ, ಅಫಜಲಪೂರ ತಾ: ಸಂಘದಲ್ಲಿ ಒಟ್ಟು 1847 ಸದಸ್ಯರಿರುತ್ತಾರೆ. (ಸದಸ್ಯರ ಸಂಪೂರ್ಣ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.) |
| ಊ) | ಪ್ರಾಥಮಿಕ ಪತ್ತಿನ ಸಂಘದ ಸದಸ್ಯರಾಗಲು ಅನುಸರಿಸುವ ಅರ್ಹತೆ ಹಾಗೂ ಮಾನದಂಡಗಳೇನು:<br>ಸದಸ್ಯತ್ವ ಪಡೆಯಲು ನಿಗದಿಪಡಿಸಿದ ಶುಲ್ಕವೆಷ್ಟು:(ಮಾಹಿತಿ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16 ಹಾಗೂ ಸಂಘದ ಬೈಲಾ ಸಂಖ್ಯೆ:08 ರನ್ವಯ ಸಂಘದ ಸದಸ್ಯತ್ವ 1872 ರ ಕರಾರು ಅಧಿನಿಯಮದಡಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ಅರ್ಹನಾಗಿರುವ ಹಾಗೂ ಸಂಘದ ಕಾರ್ಯವ್ಯಾಪ್ತಿಯಲ್ಲಿ ವಾಸಿಸುವಂತಹವರಿಗೆ ಸದಸ್ಯತ್ವವನ್ನು ಪಡೆದುಕೊಳ್ಳಲಾಗುವುದು. ಸಂಘವು ನೋಂದಣಿಯಾದಾಗಿನಿಂದ ಪ್ರತಿ ಷೇರಿನ ಮುಖಬೆಲೆ ರೂ.100/- ಇದ್ದು ಸನ್ 2012-13ನೇ ಸಾಲಿನಲ್ಲಿ ಸಂಘದ ಬೈಲಾ ತಿದ್ದುಪಡಿಯಾಗಿದ್ದು, ಬೈಲಾ ಸಂಖ್ಯೆ:07ರ ಅನ್ವಯ ಪ್ರತಿ ಷೇರಿನ ಮುಖ ಬೆಲೆ ರೂ.500/- ನಿಗದಿಪಡಿಸಲಾಗಿರುತ್ತದೆ. (ಸಂಘದ ಬೈಲಾ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.) |

**ಸಿಒ 101 ಸಿಎಲ್ಎಮ್ 2021 (ಇ)**

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು